**International Journal of Academic Research**
**ISSN: 2348-7666; Vol.3, Issue-3(2), March, 2016**
**Impact Factor: 3.075; Email: drtvramana@yahoo.co.in**

# ಜಗದ್ಗುರು ಶ್ರೀ ವೀರಸಿಂಹಾಸನ ಮಠ ಸುತ್ತೂರು – ಒಂದು ಅಧ್ಯಯನ

ಶ್ರೀನಿವಾಸ ರಾವ್ ಎಸ್
ಸಂಶೋಧನಾವಿದ್ಯಾರ್ಥಿ.
ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,
ಕುವೆಂಪು ವಿ.ವಿ. ಜ್ಞಾನ ಸಹ್ಯಾದ್ರಿ, ಶಂಕರ ಘಟ್ಟ.

ಆಧುನಿಕ ಸಮಾಜವು ಅರ್ಥ–ಕಾಮಪ್ರಧಾನವಾಗುತ್ತಿದೆ ಎಂಬ ಅಭಿಪ್ರಾಯವಿದೆ. ಅಲ್ಲದೆ ವ್ಯಕ್ತಿಕೇಂದ್ರಿತವಾಗುತ್ತಿದೆ. ವ್ಯಕ್ತಿ ತನ್ನ ಅನುಭೋಗಕ್ಕಾಗಿ ಹೆಚ್ಚು ಶ್ರಮ ಹಾಕುವುದರ ಜೊತೆಯಲ್ಲಿ ತನ್ನ ಅವಶ್ಯಕತೆಗಿಂತ ಹೆಚ್ಚು–ಹೆಚ್ಚು ಸಂಗ್ರಹಿಸುತ್ತಿದ್ದಾನೆ.[1] ಇದರ ರಕ್ಷಣೆಗಾಗಿ ಗಳಿಸಿದವ ಪ್ರಯತ್ನಿಸುತ್ತಿದ್ದರೆ, ಅಪಹರಿಸಲು ಇತರರು ಹೊಂಚುಹಾಕುತ್ತಿರುತ್ತಾರೆ. ಕುಟುಂಬ ಶಿಥಿಲಗೊಂಡಿದೆ. ಸಮಾಜ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದೆ. ಇದರ ಪರಿಣಾಮವಾಗಿ ವ್ಯಕ್ತಿ–ಕುಟುಂಬ–ಸಮಾಜ ವಿಘಟನೆಗೊಳ್ಳುತ್ತಿದೆ. ಅಪ್ರಾಮಾಣಿಕತೆ, ಅನೈತಿಕತೆ, ಆತ್ಮಹತ್ಯೆ, ಅಪರಾಧಗಳು ಹೆಚ್ಚುತ್ತಿವೆ. ದೈಹಿಕ–ಮಾನಸಿಕ ಅನಾರೋಗ್ಯ, ಕೋಮುಗಲಭೆಗಳು, ಭಯೋತ್ಪಾದನಾ ಕೃತ್ಯಗಳು ಹೆಚ್ಚುತ್ತಿವೆ, ಅವಶ್ಯಕತೆ ಇರುವವರಿಗೆ ಸೇವೆ ದೊರೆಯುತ್ತಿಲ್ಲ, ಪರಿಸರ ಮಾಲಿನ್ಯ, ರಾಷ್ಟ್ರಗಳ ಶಸ್ತ್ರಾಸ್ತ್ರಗಳ ಸಂಗ್ರಹ–ಬಳಕೆಯಲ್ಲಿ ಪೈಪೋಟಿ, ಭೂಮಿಯ ತಾಪಮಾನ ಅಧಿಕವಾಗುತ್ತಿದೆ...ಎಂದು ಕೆಲವರು ಹೇಳುತ್ತಿದ್ದರೆ, ಇನ್ನೊಂದೆಡೆ ಧಾರ್ಮಿಕ ಜಾಗೃತಿಯಾಗುತ್ತಿದೆ. ಮಾನವ ಸಮಾಜವು ತನ್ನ ಜಾತಿ–ಮತ–ಪಂಥ–ವರ್ಣ–ಲಿಂಗ–ದೇಶ–ಭಾಷೆಗಳನ್ನು ಮೀರಿ ಎಲ್ಲರ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.[2] ಇದಕ್ಕಾಗಿಯೇ ಅನೇಕ ಸ್ವಯಂಸೇವಾ ಸಂಘ–ಸಂಸ್ಥೆಗಳು ಟೊಂಕಕಟ್ಟಿ ನಿಂತಿವೆ. ಗ್ರಾಮೀಣ ಪ್ರದೇಶದಿಂದ ವಿಶ್ವಸಂಸ್ಥೆಯವರೆಗೆ ಈ ಸ್ಥಾನೀಯ ಸಂಸ್ಥೆಗಳ ಕಾರ್ಯ ವಿಸ್ತರಿಸಿದೆ. ಈ ರೀತಿಯ ಸಂಸ್ಥೆಗಳಲ್ಲಿ ಧಾರ್ಮಿಕ ಹಿನ್ನಲೆಯುಳ್ಳ ಮಠ–ಮಾನ್ಯಗಳ ಪಾತ್ರ ಹಿರಿದಾದುದಾಗಿದೆ. ಅದರಲ್ಲೂ ವೀರಶೈವ ಮಠಗಳ ಪತ್ರ ಮಹತ್ವದ್ದು. ಇದರಲ್ಲಿ ಸುತ್ತೂರು ಮಠವು ಈ ಶತಮಾನದಲ್ಲಿ ಅದ್ವಿತಿಯ ಪಾತ್ರವಹಿಸಿರುವುದನ್ನು ಈ ಶೋಧಪತ್ರವು ಪರಿಶಿಲಿಸಿದೆ.

ಭಗವಾನ್ ಶ್ರೀಶಂಕರಾಚಾರ್ಯರು ಕರ್ನಾಟಕದ ಶೃಂಗೇರಿಯಲ್ಲಿ ತಮ್ಮ ಮೊದಲ ಮಠವನ್ನು ಸ್ಥಾಪಿದರು. ಇದಕ್ಕೂ ಪೂರ್ವದಲ್ಲಿ ಈ ದೇಶದಲ್ಲಿ ಬೇರೆ ಬೇರೆ ಹೆಸರಿನಲ್ಲಿ ಮಠಗಳ ಕಾರ್ಯ ನಡೆಯುತಿತ್ತು. ಆಶ್ರಮದಲ್ಲಿ ಗುರು–ಶಿಷ್ಯರು ನೆಲೆಸಿ ಅಧ್ಯಯನ–ಅಧ್ಯಾಪನ ನಡೆಸುತ್ತಿದ್ದರೆ, ಬೌದ್ಧಯತಿ–ಬಿಕ್ಕುಗಳು ಬೌದ್ಧವಿಹಾರ–ಚೈತ್ಯಾಲಯ–ಸಂಘಾರಾಮಗಳಲ್ಲಿ ಅಧ್ಯಯನ–ಅಧ್ಯಾಪನ ನಡೆಸುತ್ತಿದ್ದರು. ಜೈನಮುನಿಗಳು–ತೀರ್ಥಂಕರರು–ಶಿಷ್ಯರು ಜೈನಬಸದಿಗಳಲ್ಲಿ ನೆಲೆಸಿ ಅಧ್ಯಯನ–ಅಧ್ಯಾಪನ ನಡೆಸುತ್ತಿದ್ದರು. ಹನ್ನೆರಡನೇ ಶತಮಾನದಲ್ಲಿ ಧಾರ್ಮಿಕ ಕ್ರಾಂತಿನ್ನುಂಟುಮಾಡಿದ ಶ್ರೀ ಬಸವಾದಿ ಶರಣರು ಅನುಭವ ಮಂಟಪದ ಮೂಲಕ ಜನಜಾಗೃತಿ–ಧರ್ಮದಜಾಗೃತಿಯನ್ನುಂಟುಮಾಡಿದರು. ಇದರ ಫಲವಾಗಿ ನಾಡಿನಾದ್ಯಂತ ಸಾವಿರಾರು ಮಠಗಳು ಆರಂಭಿಸಲ್ಪಟ್ಟವು. ವೀರಶೈವ ಪಂಥಿಯರು ತಮ್ಮದೇ ಮಠಗಳನ್ನು ಕಟ್ಟಿ ವಚನಗಳ ಮೂಲಕ ಭಾರತೀಯ ವಾಙ್ಮಯಗಳ ಸಾರವನ್ನು ವಿಶ್ವಕ್ಕೆ ಉಣಬಡಿಸಿದರು. ಕಾಯಕ – ಅನ್ನ – ಅಕ್ಷರ – ಜ್ಞಾನ ದಾಸೋಹಗಳ ಮೂಲಕ ಜನ–ಮನದ ದಾಹವನ್ನಿಂಗಿಸಿದರು.

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮಠಗಳ ಅರ್ಥದ ಬಗ್ಗೆ ಅನೇಕ ವ್ಯಾಖ್ಯಾನಗಳು ಪ್ರಕಟಗೊಂಡಿವೆ. ಉತ್ತರದಲ್ಲಿ ಮಠವನ್ನು ಆಶ್ರಮ, ಅಸ್ಥಲ್, ಸಂಗತ್, ಅಖಾಡ ಇತ್ಯಾದಿ ಹೆಸುರಗಳಿಂದ ಕರೆಯುತ್ತಾರೆ.[3]
'ಮಠ' ಎಂದರೆ. 'ಛಾತ್ರಾದಿನಿಲಯ'–ಗುರು–ಶಿಷ್ಯರು ನೆಲೆಸುವ ತಾಣ ಎಂದು ಅಮರಕೋಶ ತಿಳಿಸುತ್ತದೆ. ಅಂದರೆ, ಸನ್ಯಾಸಿಗಳು ವಾಸಿಸುವ ಸ್ಥಾನ(A building inhabited by ascetics, the residence of a guru) ಎಂದು ಲೂಯಿ ರೈಸ್ ತಿಳಿಸಿದ್ದಾರೆ,[4]
ಸಂಸ್ಕೃತ–ಕನ್ನಡ ಶಬ್ದ ಕೋಶವು 'ಮಠ' ಎಂದರೆ, ವಿದ್ಯಾರ್ಥಿ ನಿಲಯ, ಸಂನ್ಯಾಸಿಯ ವಾಸಸ್ಥಾನ, ಮುನಿಯ ಆಶ್ರಮ, ಗುಡಿ ಅಥವಾ ದೇವಾಲಯ ಎಂದು ಅರ್ಥಯ್ಯೆಸಿದೆ.[5]

ರೆವರೆಂಡ್ ಕಿಟ್ಟಲ್ ತಮ್ಮ ಕನ್ನಡ ಇಂಗ್ಲೀಷ್ ನಿಘಂಟಿನಲ್ಲಿ, a hut, a cotage,
a devotee's cell, a harmitage, a residence of company of ascetics,
a school, a temple ಎಂಬ ಅರ್ಥ ಕೊಟ್ಟಿದ್ದಾರೆ.
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು, 'ಛಾತ್ರೋ ಅಂತೇವಾಸೀ ಆದಿಶೇಷ್ಯಾಃ ಪರಿವ್ರಾಜಕಾಃ ಕ್ಷಪಣಕಾದೀನಾಂ ತೇಷಾಂನಿಲಯ.' ಅಂದರೆ, ವಿದ್ಯಾರ್ಥಿಗಳು, ಪರಿವ್ರಾಜಕ ಸನ್ಯಾಸಿಗಳು, ವಿರಕ್ತರು ವಾಸಿಸುವ ಮನೆ/ಸ್ಥಾನವೆಂದಿದ್ದಾರೆ.[6]
ಒಟ್ಟಿನಲ್ಲಿ ಧಾರ್ಮಿಕರು–ಸನ್ಯಾಸಿಗಳು–ಗುರು–ಶಿಷ್ಯರು ವಾಸಿಸುವ ಸ್ಥಳವೇ ಮಠ.
**ಮಠಗಳ ವರ್ಗೀಕರಣ;** ಮಠಗಳನ್ನು ಪ್ರಮುಖವಾಗಿ ವೈದಿಕ ಮತ್ತು ವೈದಿಕೇತರ ಮಠಗಳೆಂದು, ವೈದಿಕೇತರ ಮಠಗಳನ್ನು ಜೈನ ಮತ್ತು ಬೌದ್ಧವೆಂದು, ವೈದಿಕಮಠಗಳನ್ನು ತತ್ವಗಳ ಆಧಾರದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತವೆಂದು ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ಪಂಥಗಳ ಆಧಾರದಲ್ಲಿ ಶೈವ–ವೈಷ್ಣವವೆಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಪಂಚಾಯತನ ಪೂಜೆಯ ಆಧಾರದಲ್ಲಿ ಸೂರ್ಯ, ಗಣಪತಿ, ವಿಷ್ಣು, ಅಂಬಿಕೆ/ಶಕ್ತಿ ಮತ್ತು ಶಿವನೆಂದು ಐದು ಭಾಗಗಳನ್ನಾಗಿ ವಿಂಗಡಿಸಬಹುದು.
ಶೈವ ಪಂಥವನ್ನು ಶೈವ ಮತ್ತು ವೀರಶೈವವೆಂದು ಮತ್ತೆರಡು ಭಾಗಗಳನ್ನಾಗಿ ವಿಂಗಡಿಸಬಹುದು. ವೀರಶೈವ ಮಠಗಳನ್ನು ಗುರುಮಠ ಮತ್ತು ವಿರಕ್ತ ಮಠಗಳೆಂದು ವಿಭಾಗಿಸಬಹುದು.[7] ವೈಷ್ಣವ ಮಠಗಳನ್ನು ಮಾಧ್ವ ಮತ್ತು ಶ್ರೀ ವೈಷ್ಣವ ಮಠಗಳೆಂದು ವಿಭಾಗಿಸಬಹುದು. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆಯಾದ ಸುತ್ತೋರು ಮಠವು ವೀರಶೈವ ಪರಂಪರೆಗೆ ಸೇರಿದುದಾಗಿದೆ.

ಈ ಆಧ್ಯಯನವು ಕರ್ನಾಟಕದ ಸುತ್ತೂರು ಮಠಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಸಾರ್ವಜನಿಕ ನೀತಿಯನ್ನು ರಚಿಸಲು ಸಾಧ್ಯವಿಲ್ಲದಿರುವುದು ಇದರ ಮಿತಿಯಾಗಿದೆ. ಆದರೆ, ಇದರ ವಿಸ್ತಾರವಾದ ಅಧ್ಯಯನದಿಂದ ಸಮಾಜದ ಅಭಿವೃದ್ಧಿಗೆ ಒಂದು ಹೊಸ ದೃಷ್ಟಿ ನೀಡಬಹುದಾಗಿದೆ. ಅಲ್ಲದೆ, ಸಮಾಜಕಾರ್ಯ ಶಿಕ್ಷಣದಲ್ಲಿ ಭಾರತೀಯ ಚಿಂತನೆ–ಕಾರ್ಯಶೈಲಿ–ವಿಧಾನಗಳನ್ನು ಜೋಡಿಸಬಹುದಾಗಿದೆ.

ಪ್ರತಿಯೊಂದು ಅಧ್ಯಯನವು ತನ್ನದೇ ಆದ ಅಧ್ಯಯನ ವಿಧಾನಗಳನ್ನು ಹೊಂದಿರುತ್ತದೆ. ಪ್ರಸ್ತುತ ಅಧ್ಯಯನಕ್ಕಾಗಿ, ಐತಿಹಾಸಿಕ ಮತ್ತು ವ್ಯಕ್ತಿಗತ ಅಧ್ಯಯನ (historical and case study method)ವಿಧಾನಗಳನ್ನುಆಯ್ದುಕೊಳ್ಳಲಾಗಿದೆ.

ಮಠಗಳ ಇತಿಹಾಸ ತಿಳಿಯಲು ಕೈಪಿಯತ್ತುಗಳು, ಶಾಸನಗಳು, ದಾಖಲೆಗಳು,ಜಾನಪದ ಸಾಹಿತ್ಯ ಇತ್ಯಾದಿಗಳನ್ನು ಅಧ್ಯಯಿಸಬೇಕಾಗುತ್ತದೆ. ಇದನ್ನು ಐತಿಹಾಸಿಕ ವಿಧಾನದಿಂದ ತಿಳಿಯಬಹುದು. ಹಾಗಾಗಿ ಇದನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ.

ಈ ಶೋಧಕ್ಕೆ ಅವಶ್ಯ ಮಾಹಿತಿಯನ್ನು ಸಮಾಜಕಾರ್ಯಸಂಶೋಧನೆಯ ವಿಶೇಷ ಉಪಕರಣ ಮತ್ತು ತಂತ್ರಗಳಾದ ಅವಲೋಕನ-ಸಂದರ್ಶನದ ಮೂಲಕ ಮಾಡಲಾಗಿದೆ.

ಜಗದ್ಗುರು ಶ್ರೀ ವೀರಸಿಂಹಾಸನ ಸಂಸ್ಥಾನ ಮಠವು ಮೈಸೂರಿನ ಸುತ್ತೂರಿನಲ್ಲಿ ಶ್ರೀ ಶಿವರಾತ್ರಿ ಭಗವತ್ಪಾದರಿಂದ ಸ್ಥಾಪಿತವಾಯಿತು. ಇದು ಕಾಂಚಿಯ ರಾಜರಾಜಚೋಳ ಮತ್ತು ತಲಕಾಡಿನ ರಾಚಮಲ್ಲನ ಕಾಲದಲ್ಲಿ ಅಸ್ಥಿತ್ವದಲ್ಲಿತ್ತು ಎನ್ನುವುದನ್ನು ಇತಿಹಾಸದ ಅಧ್ಯಯನದಿಂದ ತಿಳಿಯಬಹುದಾಗಿದೆ ಈವರೆಗೆ 24 ಮಠಾಧೀಶರು ಅವಿಚ್ಛಿನ್ನವಾಗಿ ಈ ಮಠವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ವೀರಶೈವ ಪರಂಪರೆಗೆ ಸೇರಿದ ಈ ಮಠವು ಕಾಯಕವೇ ಕೈಲಾಸವೆಂಬ ತಾರಕ ಮಂತ್ರದಂತೆ ತನ್ನ ಕಾರ್ಯ ನಿರ್ವಹಿಸುತ್ತಿದೆ.[8]

ಇದು ಪ್ರಾರಂಭದಿಂದಲೂ ಈ ರಾಜ್ಯದ ಜನತೆಗೆ ಮಾತ್ರವಲ್ಲದೆ ನೆರೆಹೊರೆಯ ರಾಜ್ಯಗಳ ಜನತೆಗೂ ಮಾರ್ಗದರ್ಶನ ಹಾಗೂ ಸೇವೆಯನ್ನು ನೀಡುತ್ತಾ ಬಂದಿದೆ.

ಈ ಶತಮಾನದ ಮೊದಲ ಭಾಗದ ವೇಳೆಗೆ ಶ್ರೀಮಠದ 22ನೇ ಜಗದ್ಗುರುಗಳಾಗಿದ್ದ ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು ತಮ್ಮ ವಯಕ್ತಿಕ ಸಾಧನೆಯಿಂದ ಮಠದ ಕೀರ್ತಿಯನ್ನು ಪುನರ್ ಸ್ಥಾಪಿಸಿದರು. ಇವರು ಮೂರು ಕೋಟಿಗೂ ಅಧಿಕ ಷಡಕ್ಷರಿ ಮಂತ್ರವನ್ನು ಬರೆದು ಮಂತ್ರ ಮಹರ್ಷಿ ಎಂಬ ಖ್ಯಾತಿಯನ್ನು ಪಡೆದಿದ್ದರು.

23ನೇ ಜಗದ್ಗುರುಗಳಾದ ಡಾ॥ ಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳವರು ತಮ್ಮ 8ನೇ ವಯಸ್ಸಿನಲ್ಲಿ ಸಿಂಹಾಸನವನ್ನೇರಿ 12ನೆಯ ವಯಸ್ಸಿನಲ್ಲಿ (1928) ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಲೌಕಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ನೀಡಿ ಈ ಮಠಕ್ಕೆ ಹೊಸ ದೃಷ್ಟಿಯನ್ನು ನೀಡಿದರು.

24ನೇ ಮಠಾಧಿಪತಿಯಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಗಳವರು 1986ರಿಂದ ಶ್ರೀಮಠದ ಕೀರ್ತಿಯನ್ನು ವಿಶ್ವಮಟ್ಟಕ್ಕೇರಿಸಿದರು.[9]

ಇವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ವಿಕಾಸದ ಜೊತೆಜೊತೆಗೆ ಲೌಖಿಕಶಿಕ್ಷಣ, ವೈದ್ಯಕೀಯಸೇವೆ, ಗ್ರಾಮೀಣಾಭಿವೃದ್ಧಿ, ದೈಹಿಕ, ಶ್ರವಣ, ವಾಕ್, ದೃಷ್ಟಿ – ವಿಕಲಾಂಗರ ಅಭಿವೃದ್ಧಿ, ಆರ್ಥಿಕ ಸ್ವಾವಲಂಬನಾ ಕೇಂದ್ರಗಳು, ನಿರ್ವಸತಿಗರಿಗಾಗಿ ಆಶ್ರಮಗಳು, ಮುದ್ರಣಾಲಯ ಇತ್ಯಾದಿ ಸೇವಾ ಚಟುವಟಿಕೆಗಳು ಯಶಸ್ವಿಯಾಗಿ ನಡೆಯುತ್ತಿವೆ.

ಮಾನವನ್ನು ಮಾಧವನ್ನಾಗಿ ಮಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ ಅದಕ್ಕಾಗಿ ಮಠವು ಶಿಶುವಿಹಾರಗಳು-7, ನರ್ಸರಿ ಶಾಲೆಗಳು-18, ಪ್ರಾಥಮಿಕ ಶಾಲೆಗಳು-18, ಪ್ರೌಢಶಾಲೆಗಳು-54, ವಸತಿಶಾಲೆಗಳು-10, ಪದವಿ ಪೂರ್ವ ಕಾಲೇಜ್‌ಗಳು-17, ಪದವಿ ಕಾಲೇಜ್‌ಗಳು-7, ಇಂಜಿನಿಯರ್ ಕಾಲೇಜ್‌ಗಳು-4, ಪಾಲಿಟೆಕ್ನಿಕ್ ಕಾಲೇಜ್‌ಗಳು-4, ಕೈಗಾರಿಕ ತರಬೇತಿ ಕೇಂದ್ರಗಳು(ಐ.ಟಿ.ಐ)-4, ಅಲೋಪತಿ ವೈದ್ಯಕೀಯ(ಎಂ.ಬಿ.ಬಿಎಸ್)ಕಾಲೇಜ್-1, ದಂತ ಕಾಲೇಜ್-1, ಆಯುರ್ವೇದ ಕಾಲೇಜ್-1, ಫಾರ್ಮಸಿ

ಕಾಲೇಜ್-2, ನರ್ಸಿಂಗ್ ಕಾಲೇಜ್-4, ಡಿ.ಎಡ್ ಕಾಲೇಜ್-9, ಬಿ.ಎಡ್ ಕಾಲೇಜ್-5, ಕಾನೂನು ಕಾಲೇಜ್-1 ಮತ್ತು 4 ಮ್ಯಾನೇಜ್‍ಮೆಂಟ್ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ.

ಈ ಎಲ್ಲಾ 169 ಕೇಂದ್ರಗಳಲ್ಲಿ ಪ್ರತಿವರ್ಷ50ಸಾವಿರಕಿಂತ ಅಧಿಕ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇವರು ದೇಶದ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ರಾಷ್ಟ್ರದ ಅಭೀವೃದ್ಧಿಯಲ್ಲಿ ತಮ್ಮ ಕಾಣಿಕೆ ನೀಡುತ್ತಿದ್ದಾರೆ.

ಬುದ್ದಿಮಾಂದ್ಯ ಮಕ್ಕಳಿಗಾಗಿ 3, ವಾಕ್ ಮತ್ತು ಶ್ರವಣ ದೋಷವುಳ್ಳವರಿಗಾಗಿ 1 ಶಾಲೆಯನ್ನು ನಡೆಸಲಾಗುತ್ತಿದೆ. ಇದರಿಂದಾಗಿ ವಿಶಿಷ್ಟ ಚೇತನವುಳ್ಳ ಮಕ್ಕಳು ಸಹಾ ಶಿಕ್ಷಣ ಪಡೆದು ಸ್ವಾವಲಂಭಿ ಜೀವನ ನಡೆಸಲು ಸಹಕಾರಿಯಾಗಿದೆ.

ಪಾರಂಪರಿಕ ಶಿಕ್ಷಣದ ಅಭಿವೃದ್ಧಿಗಾಗಿ 10 ಸಂಸ್ಕೃತ ಪಾಠಶಾಲೆಗಳು, ವೇದ ಆಗಮ ಮತ್ತು ಜ್ಯೋತಿಷ್ಯ ಶಿಕ್ಷಣಕ್ಕಾಗಿ 2 ಪಾಠಶಾಲೆಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ 200 ಛಾತ್ರರು ಅಧ್ಯಯನ ನಡೆಸುತ್ತಿದ್ದಾರೆ. ಈ ಮೂಲಕ ಪರಂಪರೆಯ ಸಂರಕ್ಷಣೆ-ಸಂವರ್ಧನೆಯಾಗುತ್ತಿದೆ.

ರಾಷ್ಟ್ರಭಾಷೆ ರಕ್ಷಣೆ ಮತ್ತು ಪ್ರಸಾರಕ್ಕಾಗಿ 2 ಹಿಂದಿ ವಿದ್ಯಾಲಯಗಳನ್ನು ನಡೆಸಲಾಗುತ್ತಿದೆ. ಇದರಿಂದಾಗಿ ಹಿಂದಿ ಉತ್ತರದವರಿಗೆ ಮಾತ್ರ ಎಂಬ ಕೂಗಿಗೆ ಉತ್ತರ ನೀಡಿದ್ದಾರೆ.

ಸ್ವಸ್ಥವ್ಯಕ್ತಿಗಳಿಂದ ಸ್ವಸ್ಥ ಸಮಾಜ ನಿರ್ಮಿಸಲು ಸಾಧ್ಯ. ಹಾಗಾಗಿ ಈ ಸುತ್ತೂರಿನ ಜಗದ್ಗುರು ಶ್ರೀ ವೀರಸಿಂಹಾಸನ ಮಠವು **9 ಆಸ್ಪತ್ರೆ**ಗಳನ್ನು ಗ್ರಾಮ ಮತ್ತು ನಗರಕೇಂದ್ರಗಳಲ್ಲಿ ನಡೆಸುತ್ತಿದೆ. ಇದರಲ್ಲಿ ಭಾರತೀಯ ಸಾಂಪ್ರದಾಯಿಕ ವೈದ್ಯಕೀಯ ಸೇವೆಯ ಜೊತೆ ಆಧುನಿಕ ವೈದ್ಯಕೀಯ ಸೇವೆಯನ್ನು ನೀಡುತ್ತಿದೆ. ಇದರ ಜೊತೆಗೆ ಅಂಗವಿಕಲರಿಗಾಗಿ **ಕೃತಕ ಅಂಗಾಗಳ ಜೊಡನಾ ಕೇಂದ್ರ**ವನ್ನು ಆರಂಭಿಸಿದೆ. **ಕೊಯಮತ್ತೂರಿನಲ್ಲಿ ನೈಸರ್ಗಿಕ ಚಿಕಿತ್ಸೆ ಹಾಗೂ ಯೋಗ ಚಿಕಿತ್ಸೆಗಾಗಿ ಶಿಕ್ಷಣ ಮತ್ತು ಸೇವಾ ಕೇಂದ್ರ**ವನ್ನು ತೆರೆದಿದೆ. **ಸುತ್ತೂರಿನವರೆಲ್ಲರನ್ನು ಆರೋಗ್ಯವಿಮೆ**ಯಡಿ ಬರುವಂತೆ ಮಾಡಿದೆ.

ನಗರ ಮತ್ತು ಗ್ರಾಮಗಳು ಅಭೀವೃದ್ಧಿಗೊಂಡರೆ ಸಮಾಜ ಸಹಜವಾಗಿ ಅಭಿವೃದ್ಧಿ ಹೊಂದಿತ್ತದೆ. ಇದಕ್ಕಾಗಿ ಈ ಮಠವು ಬೆಂಗಳೂರು ಮತ್ತು ಮೈಸೂರಿನಲ್ಲಿ ಜನಶಿಕ್ಷಣ ಸಂಸ್ಥೆಗಳನ್ನು ಸುತ್ತೂರಿನಲ್ಲಿ, **ಕೃಷಿವಿಜ್ಞಾನ ಕೇಂದ್ರ**ವನ್ನು ಮತ್ತು ಚಾಮರಾಜನಗರದಲ್ಲಿ ವೃತ್ತಿಶಿಕ್ಷಣ ತರಬೇತಿ ಸಂಸ್ಥೆಗಳನ್ನು ನಡೆಸುತ್ತಿದೆ. ಸುತ್ತೂರಿನಲ್ಲಿರುವ ಕೃಷಿವಿಜ್ಞಾನ ಕೇಂದ್ರದಲ್ಲಿ **9 ವಿಜ್ಞಾನಿ**ಗಳಿದ್ದು ಇವರು ಕೃಷಿಕರಿಗೆ ಅಗತ್ಯವಾದ ಮಾರ್ಗದರ್ಶನ ಹಾಗೂ ತರಬೇತಿ ನಿಡುತ್ತಿದ್ದಾರೆ. ಈ ಮೂಲಕ ಕೃಷಿಕರ ಅಭಿವೃದ್ಧಿಗೆ ಸಹಕಾರಿಗಳಾಗುತ್ತಿದ್ದಾರೆ.

ನಗರೀಕರಣ ಹಾಗು ಕೈಗಾರಿಕೀಕರಣವು ಭಾರತಕ್ಕೆ ಕೇವಲ ವರ ನೀಡಲಿಲ್ಲ ಜೊತೆಜೊತೆಗೆ ಅನೇಕ ಸಾಮಾಜಿಕ ಸಮಸ್ಯೆಗಳನ್ನು ತಂದಿದೆ. ಇದರ ನಿವಾರಣೆಗಾಗಿ ನಿರಾಶ್ರಿತರಿಗೆ ಆಶ್ರಯ ನೀಡಲು ನಿರಾಶ್ರಿತರು ಮತ್ತು ಅನಾಥರಿಗಾಗಿ 14 ಅನಾಥಾಲಯಗಳನ್ನು ನಡೆಸುತ್ತಿದೆ. ನಿರ್ಗತಿಕರಿಗಾಗಿ ಸುತ್ತೂರು, ಹುಲ್ಲಳ್ಳಿ ಮತ್ತು ಮಾಲೂರಿನಲ್ಲಿ 3 ಕೇಂದ್ರಗಳನ್ನು ನಡೆಸುತ್ತಿದೆ. ನಿರಾಶ್ರಿತವೃದ್ಧರಿಗಾಗಿ ಮೈಸೂರು ಮತ್ತು ಸುತ್ತೂರಿನಲ್ಲಿ 2 ವೃದ್ಧಾಶ್ರಮಗಳನ್ನು ನಡೆಸುತ್ತಿದೆ.

ಆಧುನಿಕ ಶಿಕ್ಷಣ ಗ್ರಾಮೀಣ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ ಸುಲಭದಲ್ಲಿ ಎಟುಕುವಂತೆ ಮಾಡಲು ಹಾಗು ಶಿಕ್ಷಣ ಅರಸಿ ಬರುವ ಶಿಕ್ಷಾಣಾರ್ಥಿಗಳಿಗಾಗಿ **36 ವಿದ್ಯಾರ್ಥಿನಿಲಯ**ಗಳನ್ನು ನಡೆಸುತ್ತಿದೆ.

ಆರ್ಥಿಕಾಭಿವೃದ್ಧಿಯಿಂದ ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಿ ಆಮೂಲಕ ಸೇವೆ ಮತ್ತು ಸರಕುಗಳ ಉತ್ಪಾದನೆ ಅಧಿಕವಾಗುತ್ತದೆ. ಇದಕ್ಕಾಗಿ ಜನರಲ್ಲಿ ಅರ್ಥಜಾಗೃತಿ ಮೂಡಿಸಲು ಮತ್ತು ಸೇವೆ–ಸಹಕಾರ–ಅಭಿವೃದ್ಧಿ ಮನೋಭಾವನೆಯನ್ನು ಬೆಳಸಲು **6 ಸಹಕಾರ ಸಂಘಗಳನ್ನು** ನಡೆಸುತ್ತಿದೆ. ಇದರಿಂದಾಗಿ ಗ್ರಾಮೀಣರು ಸಹ ಉತ್ತಮ ವ್ಯವಹಾರ ಕುಶಲಿಗಳಾಗುತ್ತಿದ್ದಾರೆ. ಈ ಮೂಲಕ ಆರ್ಥಿಕಾಭಿವೃದ್ಧಿಗೆ ತಮ್ಮ ಕೊಡುಗೆ ನೀಡುತ್ತಿದ್ದಾರೆ.

ಕಲೆ ಮತ್ತು ಸಂಸ್ಕೃತಿಗಳು ಪ್ರತಿಯಂದು ಸಮಾಜದ ಏಳಿಗೆಯನ್ನು ತೋರಿಸುತ್ತವೆ. ಹಾಗಾಗಿ ಈ ಮಠವು ಸಾಂಪ್ರದಾಯಿಕ ಕಲೆಯನ್ನು ಉಳಿಸಿ ಬೆಳಸಲು ಮೈಸೂರಿನಲ್ಲಿ **ಅರ್ಬನ್‌ಹಾತ್** ಆರಂಭಿಸಿದೆ. ಈ ಮೂಲಕ ದೇಸಿ ಸಂಸ್ಕೃತಿ ನಗರ ಪ್ರದೇಶದವರು ಅರಿಯಲು ಸಹಕಾರಿಯಾಗಿದೆ. ಇದರ ಜೊತೆಗೆ ಗ್ರಾಮೀಣ ಕಲೆಗೂ ಪ್ರೋತ್ಸಾಹ ದೊರೆಯುತ್ತಿದೆ. **ಸುತ್ತೂರು, ಗುಂಡ್ಲುಪೇಟೆ, ಟಿ. ನರಸೀಪುರ, ಸರಗೂರು ಮತ್ತು ಬೆಂಗಳೂರಿನಲ್ಲಿ 5 ಸಾಂಪ್ರದಾಯಿಕ ಕೇಂದ್ರ**ಗಳನ್ನು ತೆರೆದು ಜನರಲ್ಲಿ ಪರಂಪರೆಯ ಕುರಿತು ಜಾಗೃತಿ ಮೂಡಿಸುತ್ತಿದೆ.

ಜನರಲ್ಲಿ ಅಧ್ಯಯನ ಪ್ರವೃತ್ತಿ ಬೆಳಸಲು ಜೆಎಸ್‌ಎಸ್ ಮಾಸಿಕ, **ಪ್ರಸಾದ ದ್ವೈಮಾಸಿಕ** ಮತ್ತು **ಶರಣಪಥ ಅರ್ಧವಾರ್ಷಿಕ** ಪತ್ರಿಕೆ–ನಿಯತಕಾಲಿಕೆಗಳನ್ನು ಹೊರಡಿಸುತ್ತಿದೆ. ಇದಲ್ಲದೆ 210ಕ್ಕೂ ಅಧಿಕ ಪುಸ್ತಕಗಳನ್ನು, 19 ಧ್ವನಿ ಸುರಳಿಗಳನ್ನು, 11 ಸಿಡಿಗಳನ್ನು ಒಂದು ವಿಡಿಯಾ ಕ್ಯಾಸೆಟನ್ನು ಲೌಕಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಕ್ಕಾಗಿ ಬಿಡುಗಡೆ ಮಾಡಿದೆ.

ದೇಶವಿದೇಶಗಳಲ್ಲಿ 11 ವಿಶ್ವಸ್ತ ಮಂಡಳಿಗಳನ್ನು ಸ್ಥಾಪಿಸಿ ಇವಿಗಳ ಮೂಲಕ ಉತ್ತಮ ಧಾರ್ಮಿಕ ಸಂಸ್ಕಾರ–ಶಿಕ್ಷಣ–ಸೇವಾ–ಸ್ವಾವಲಂಬನಾ ಶಿಕ್ಷಣ ನೀಡುತ್ತಿದೆ. ಉದಾಹರಣೆಗೆ **ಭಾರತೀಯ ಸಾಂಸ್ಕೃತಿ ಪರಿಷತ್, ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರ** ಇತ್ಯಾದಿ.

ಮಾನವನಿಗೆ ವರವಾಗಬೇಕಿದ್ದ ಧರ್ಮವು ಕೆಲವು ಮತಾಂಧರಿಂದಾಗಿ ಭಯೋತ್ಪದನಾ, ಕೋಮುವಾದದ ಆಶ್ರಯ ತಾಣವಾಗುತ್ತಿದ್ದರೇ, ಧರ್ಮವೆಂದರೆ ಅಫೀಮು ಇದೇ ಎಲ್ಲಾ ಸಮಸ್ಯೆಗಳಿಗೆ ಮೂಲ ಎಂಬ ಇನ್ನೊಂದು ವಾದ ಪ್ರಪಂದಚಲದಲ್ಲಿದೆ. ಇದನ್ನು ನೀವಾರಿಸಲು ವಿಶ್ವಶಾಂತಿಗೆ ಧರ್ಮ ಹೇಗೆ ಕೊಡುಗೆ ನೀಡಬಹುದೆಂದು ತಿಳಿಸಲು ಮಠವು **ಫೌಂಡೇಷನ್ ಆಫ್ ಯುನಿಟಿ ಆಫ್ ರಿಲಿಜಿಯಸ್ ಅಂಡ್ ಎನ್‌ಲೈಟನ್ಡ್ ಸಿಟಿಜನ್ ಷಿಪ್ (ಫ್ಯುರೆಕ್) ಸ್ಥಾಪಿಸಿದೆ.** ಈ ಸಂಸ್ಥೆ 15 ಮಂದಿ ಆಧ್ಯಾತ್ಮಿಕ ಮುಂದಾಳುಗಳಿಂದ ಕೂಡಿದೆ. 2004 ಜೂನ್ 14 ರಂದು ಮಾಜಿ ರಾಷ್ಟ್ರಧ್ಯಕ್ಷರಾದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ಇದನ್ನು ಉದ್ಘಾಟಿಸಿದರು. ಇದರ ವಿಶೇಷ ಉಪನ್ಯಾಸವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠವು ಮೈಸೂರಿನಲ್ಲಿ ಏರ್ಪಡಿಸಿತ್ತು. ಇದರ ಮೂಲಕ ವೈಶ್ವಿಕತೆಯನ್ನು ಮಠವು ಸಾರುತ್ತಿದೆ.

ಜಾತ್ರೆ, ಉತ್ಸವ, ಆರಾಧನೆ, ಜಯಂತಿ, ಪೂರ್ಣಿಮಾ ಮತ್ತು ಅಮವಾಸೆಯಂದು ವಿಶೇಷ ಆಚರಣೆಗಳಿದ್ದು ಈ ನಿಮಿತ್ತ ಧಾರ್ಮಿಕ ಜಾಗೃತಿ, ಕಲೆ–ಸಂಸ್ಕೃತಿಯ ಪೋಷಣೆ, ಸಾಧಕರಿಗೆ ಸನ್ಮಾನ, ಇತ್ಯಾದಿಕಾರ್ಯಕ್ರಮಗಳು ನಡೆಯುತ್ತವೆ.

ಸುತ್ತೂರಿನ ಜಗದ್ಗುರು ಶ್ರೀ ವೀರಸಿಂಹಾಸನ ಮಠಕ್ಕೆ ಅನೇಕ ಗಣ್ಯ–ಮಾನ್ಯರು ಆಗಮಿಸಿ ತಮ್ಮ ನೆನಪನ್ನು ಇತಿಹಾಸದಲ್ಲಿ ಸೇರಿಸಿದ್ದಾರೆ. ಇವರ ನುಡಿಗಳು ಮಠದ ಕಾರ್ಯ–ವಿಸ್ತಾರ–ಪ್ರಾಮುಖ್ಯತೆ ತಿಳಿಸುತ್ತದೆ.

ಪ್ರತಿಯೊಂದು ಶಿಶುವು ಜನಿಸುತ್ತಾ ವಿಶ್ವಮಾನವನಾಗಿರುತ್ತಾನೆ. ಆದರೆ ಅವನು ಬೆಳೆಯುತ್ತಾಹೋದಂತೆ ಅಲ್ಪ ಮಾನವನಾಗುತ್ತಾನೆ. ಅವನನ್ನು ಪುನಃ ವಿಶ್ವಮಾನವನನ್ನಾಗಿ ಪರಿವರ್ತಿಸುವುದರಲ್ಲಿ ಶಿಕ್ಷಣವು ಮಹತ್ತರ ಪಾತ್ರವನ್ನು ವಹಿಸುತ್ತದೆ. ಈ ವಿದ್ಯಾಸಂಸ್ಥೆಗಳು ಈ ಪರಿವರ್ತನೆಯ ಕಾರ್ಯವನ್ನು ಮಾಡಬೇಕು. ಸ್ವಾಮೀಜಿಯವರು ತೆರೆದಿರುವ ವಸತಿ ಗೃಹಗಳು ಎಲ್ಲಾ ಜಾತಿ ಹಾಗೂ ಧರ್ಮದ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ ಎನ್ನುವ ಸಂಗತಿ ತಿಳಿದು ಸಂತಸವಾಗಿದೆ. –**ಶ್ರೀ ಕುವೆಂಪು**

ಸಮಾಜದ ಏಳಿಗೆಗಾಗಿ ತಮ್ಮ ಜೀವನವನ್ನೇ ಸ್ವಾಮೀಗಳು ತ್ಯಾಗಮಾಡಿದ್ದಾರೆ. ಶಿಕ್ಷಣವನ್ನು ನೀಡುವುದು ಹಾಗೂ ಶೋಷಿತರಿಗೆ ಸಹಾಯ ಮಾಡುವುದೇ ಇವರ ಜೀವನದ ಪ್ರಮುಖ ಗುರಿಯಾಗಿದೆ. ಇವರು ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಣ ನೀಡುತ್ತಿಲ್ಲ ಊಟ ಹಾಗೂ ವಸತಿಯ ವ್ಯವಸ್ಥೆಯನ್ನೂ ಮಾಡಿದ್ದಾರೆ. ಈ ಕಾರ್ಯವು ದೇಶಕ್ಕೆ ಅಪಾರವಾದ ಸಹಾಯವನ್ನು ಮಾಡಿದೆ.– **ಡಾ॥ ರಾಜೇಂದ್ರ ಪ್ರಸಾದ್,**

ಈ ಸಂಸ್ಥೆಯ ವಾತಾವರಣ ಹಾಗೂ ಇಲ್ಲಿ ನೀಡಿರುವ ಸೌಲಭ್ಯಗಳು ಅತ್ಯಂತ ಉತ್ತೇಜನಕಾರಿಯಾಗಿವೆ. – **ಡಾ॥ ಎಸ್. ರಾಧಾಕೃಷ್ಣನ್**

ಈ ಮಠವು ಧರ್ಮದ ಪ್ರಚಾರದಲ್ಲಿ ತನ್ನನ್ನು ಹಲವಾರು ಶತಮಾನಗಳಿಂದ ತೊಡಗಿಸಿಕೊಂಡಿದೆ ಹಾಗೂ ಸಮಾಜದ ಏಳಿಗೆಗಾಗಿ ದುಡಿಯುತ್ತಿದೆ. ಬಡ ಮಕ್ಕಳಿಗೆ ಉಚಿತ ಶಿಕ್ಷಣದೊಂದಿಗೆ ಊಟ ಹಾಗೂ ವಸತಿ ವ್ಯವಸ್ಥೆಯನ್ನೂ ಮಾಡುತ್ತಾ ಬಂದಿದ್ದಾರೆ ಹಾಗಾಗಿ ಜನರು ಸ್ವಾಮೀಯವರನ್ನು ಅಪಾರ ಗೌರವದಿಂದ ನೋಡುತ್ತಾರೆ.– **ಡಾ॥ ಬಿ.ಡಿ. ಜತ್ತಿ**

ಸುತ್ತೂರಿನ ವೀರಸಿಂಹಾಸನ ಮಠವು ಈ ಸಮಾಜಕ್ಕೆ ಅಪಾರವಾದ ಸಹಾಯವನ್ನು ನೀಡುತ್ತಿರುವುದು. ಈ ಕಾರ್ಯ ಬಹಳ ಕಾಲದಿಂದ ನಿರಂತರವಾಗಿ ನಡೆದುಕೊಂಡು ಬಂದಿದೆ. ಧರ್ಮ, ಜಾತಿ, ಸಮಾಜ, ಸಾಹಿತ್ಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಈ ಮಠದ ಕೊಡುಗೆ ಅಪಾರ ಹಾಗೂ ಹಲವಾರು ಶತಮಾನಗಳಿಂದ ಇರುವ ಪ್ರಕ್ರಿಯೆ.– **ಶ್ರೀ ಜಯಚಾಮರಾಜೇಂದ್ರ ಒಡೆಯರ್**

ಜೀವನದ ಎಲ್ಲಾ ಮಜಲುಗಳಲ್ಲಿಯು ಶ್ರೀ ರಾಜೇಂದ್ರ ಸ್ವಾಮೀಗಳವರು ಸೇವೆ ಮಾಡಿದ್ದಾರೆ, ಮಾಡುತ್ತಿದ್ದಾರೆ ಹಾಗೂ ಮಾಡುತ್ತಲೇ ಇರುತ್ತಾರೆ.– **ಶ್ರೀ ವೀರೇಂದ್ರ ಹೆಗ್ಗಡೆ**

ನಮ್ಮ ನಾಗರೀಕತೆಯ ಪರಂಪರೆಯಿಂದ ಸ್ವೀಕರಿಸಿದ ಮೌಲ್ಯ ವ್ಯವಸ್ಥೆಯನ್ನು ವಿಶ್ವಕ್ಕೆ ಪ್ರಸಾರ ಮಾಡುವುದೇ ಅಮೇರಿಕಾದಲ್ಲಿ ಜೆಎಸ್ಎಸ್ ಕೇಂದ್ರವನ್ನು ಸ್ಥಾಪಿಸುವ ಪ್ರಮುಖ ಉದ್ದೇಶ. ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಮತ್ತು ಮೌಲ್ಯ ವ್ಯವಸ್ಥೆಗಳು ಆಧ್ಯಾತ್ಮಿಕ ವ್ಯವಸ್ಥೆಯ ಸಮಗ್ರ ಪ್ರಯತ್ನದ ಮೂಲಕ ಪ್ರಜ್ಞಾವಂತ ನಾಗರೀಕನ ವಿಕಾಸಕ್ಕೆ ದಾರಿಮಾಡಿಕೊಡಬಲ್ಲದು. . . . . ಒಂದು ದೇಶ ಆರ್ಥಿಕವಾಗಿ ಮುಂದುವರಿಯಲು ಅದರ ಪ್ರಜೆಗಳು ಹಲವಾರು ರೀತಿಯ ವಿಷಯಗಳನ್ನು ತಿಳಿದುಕೊಳ್ಳಬೇಕು ಅದು ಆಧ್ಯಾತ್ಮ, ಶಿಕ್ಷಣ, ಕಾರ್ಖಾನೆಗಳು ಹಾಗೂ ಪ್ರಮುಖವಾಗಿ ಆ ವ್ಯಕ್ತಿಯನ್ನು ಅವಲಂಬಿಸಿರುತ್ತದೆ ಈ ಮಹತ್ಸಾಧನೆಯ ಮುಂಚೂಣಿಯಲ್ಲಿರುವ ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮೀಜಿಗಳಿಗೂ, ಈ ಕೇಂದ್ರದ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳು. – **ಡಾ॥ ಅಬ್ದುಲ್ ಕಲಾಂ**

ಸುತ್ತೂರಿನ ಜಗದ್ಗುರು ಶ್ರೀ ವೀರಸಿಂಹಾಸನ ಮಠವು ಮೈಸೂರಿನ ಸುತ್ತಮುತ್ತಲಿನ ಊರುಗಳಲ್ಲದೆ **ಅಮೇರಿಕಾ ಮತ್ತು ಅರಬ್ ರಾಷ್ಟ್ರ**ಗಳಲ್ಲು ತನ್ನ ಕಾರ್ಯವನ್ನು ವಿಸ್ತರಿಸಿಕೊಂಡಿದೆ. ಸಮಾಜದ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸುತ್ತಿದೆ. ಇದನ್ನು ಇಲ್ಲಿ ಭೇಟಿನೀಡಿದ ಗಣ್ಯ-ಮಾನ್ಯರೂ ಗುರುತಿಸಿದ್ದಾರೆ.

ಹಿಂದಿನಿಂದಲೂ ಮಠಗಳು ಪ್ರಜಾ ಕಲ್ಯಾಣವನ್ನೇ ಬಯಸುತ್ತಿದ್ದವು ಸುತ್ತೂರಿನ ಜಗದ್ಗುರು ಶ್ರೀ ವೀರಸಿಂಹಾಸನ ಮಠವು ಇದಕ್ಕೆ ಹೊರತಾಗಿಲ್ಲ. ಈ ಲೇಖನವು ಕೆಳಗಿನ ಪ್ರಮುಖ ಅಂಶಗಳನ್ನು ಗುರುತಿಸಿದೆ.

- ಸ್ವತಂತ್ರದ ಪೂರ್ವದಲ್ಲಿಯೇ ಶೈಕ್ಷಣಿಕ ಕಾರ್ಯವನ್ನು ಈ ಮಠ ಆರಂಭಿಸಿತ್ತು.
- ವೇದ-ಸಂಸ್ಕೃತ-ವಚನ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಕಲಿಸಲಾಗುತ್ತಿದೆ.
- ಆಧುನಿಕ ಶಿಕ್ಷಣವನ್ನು ಉತ್ತಮ ಪರಿಸರದಲ್ಲಿ ಆಧ್ಯಾತ್ಮಕ ಶಿಕ್ಷಣದ ಜೊತೆಗೆ ನೀಡುತ್ತಿದೆ.
- ಸಾಂಪ್ರದಾಯಕ ಚಿಕಿತ್ಸಾ ಪದ್ಧತಿಯ ಜೊತೆ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆ ನೀಡುತ್ತಿದೆ.
- ಜಾನಪದ ಕಲೆಗಳಿಗೆ ಪ್ರೋತ್ಸಾಹ ನೀಡಲು ಜಾತ್ರೆ-ಉತ್ಸವಗಳಲ್ಲಿ ವಿಶೇಷ ಅವಕಾಶ ಮಾಡಿಕೊಟ್ಟಿದೆ.
- ಮಠಕ್ಕೆ ಬರುವ ಕೌಟುಂಭಿಕ ಕಲಹ ಹಾಗೂ ಇತರೇ ವ್ಯಾಜ್ಯಗಳನ್ನು ಇಬ್ಬರಿಗೂ ಸಮಾದಾನವಗುವಂತೆ ವಿಳಂಬವಿಲ್ಲದೆ ನೀಡಿ ನ್ಯಾಯಾಲಯದ ಕಾರ್ಯವನ್ನೂ ಮಾಡುತ್ತಿದೆ.
- ಉಚಿತ ವಿದ್ಯಾರ್ಥಿ ನಿಲಯದ ಮೂಲಕ ಪ್ರತಿವರ್ಷ 9000ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ.
- ಜ್ಞಾನ ಜಿಜ್ಞಾಸುಗಳಿಗೆ ಉತ್ತಮ ಗ್ರಂಥಾಲಯ ತೆರೆದು ಅವರ ತೃಷೆ ನೀಗಿಸುತ್ತಿದೆ.
- ಸ್ವಸಹಾಯ ಸಂಘ, ಸಹಕಾರ ಸಂಘ ಮತ್ತು ಸ್ವ ಉದ್ಯೋಗ ತರಭೇತಿ ಕೇಂದ್ರಗಳ ಮೂಲಕ ಹಿಂದುಳಿದವರ ಆರ್ಥಿಕಾಭಿವೃದ್ಧಿಗಾಗಿ ಸಹಕಾರ ಮತ್ತು ಪ್ರೇರಣೆ ನೀಡುತ್ತಿದೆ.
- ಕೃಷಿಕರಿಗೆ ಸಾವಯವ ಕೃಷಿಯ ಜೊತೆ ಆಧುನಿಕ ಕೃಷಿಯ ಪರಿಚಯ ಮಾಡಿಸುತ್ತಿದೆ.
- ಧಾರ್ಮಿಕ ಜಾಗೃತಿಗಾಗಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುತ್ತಿದೆ.
- ದಾಸೋಹದ ಮೂಲಕ ಹಸಿದವರಿಗೆ ಆಹಾರ-ಶಿಕ್ಷಣ-ಸಂಸ್ಕಾರ ನೀಡುತ್ತಿದೆ.

ಹೀಗೆ ಸುತ್ತೂರು ಮಠವು ಸಮಾಜೋಧಾರ್ಮಿಕ ಕ್ರಾಂತಿಯನ್ನು ಸದ್ದಿಲ್ಲದೆ ಮೈಸೂರಿನ ಒಂದು ಚಿಕ್ಕ ಗ್ರಾಮದಲ್ಲಿದ್ದುಕೊಂಡು ಮಾಡುತ್ತಿದೆ. ವಿಶ್ವದೆಲ್ಲೆಡೆ ಅಂಧಕಾರವೇ ಇರುವಾಗ ಅಂಧಕಾರದಬಗ್ಗೆ ಮಾತನಾಡದೆ ಒಂದು ಕಿರುದೀವಿಗೆಯಾಗಿ ಸಮಾಜಕ್ಕೆ ಬೆಳಕನ್ನು ನೀಡುತಾ ವಿಶ್ವಕ್ಕೆ ಆಶಾಕಿರಣವಾಗಿ ಬೆಳಗುತ್ತಿದೆ. ಈ ರೀತಿ ಎಲ್ಲಾ ಮಠ-ಮಾನ್ಯಗಳು ಕಾರ್ಯನಿರ್ವಹಿಸಿದರೆ ಸ್ವಸ್ಥ ವ್ಯಕ್ತಿ ಮತ್ತು ಸ್ವಸ್ಥ ಸಮಾಜದ ರಚನೆ ಕನಸೇನಲ್ಲ.

**ಗ್ರಂಥ ಋಣ;**

1. **ಡಾ.** ಪದ್ಮನಾಭ ಮರಾಠೆ-ಸಮೃದ್ಧ ರಾಷ್ಟ್ರ : ಸಮಗ್ರ ದೃಷ್ಟಿ –ಪುಟ 2, ಪ್ರಕಾಶಕರು; ಶ್ರೀದುರ್ಗ ಸಂಸ್ಕೃತ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಳಸ. 2009.

2. **ಡಾ.** ಪದ್ಮನಾಭ ಮರಾಠೆ-ಸಮೃದ್ಧ ರಾಷ್ಟ್ರ : ಸಮಗ್ರ ದೃಷ್ಟಿ –ಪುಟ 14 ಪ್ರಕಾಶಕರು; ಶ್ರೀದುರ್ಗ ಸಂಸ್ಕೃತ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಳಸ. 2009.

3. Sadyojata Swamiji- Saiva and Virasaiva Mathas in Karnataka (From 10th Century to the Present period)
PhD. Theses Submited to Dept of History, Karnataka University, Dharavada. 1974

4. ಅಮರಕೋಶ 2.29 – ಸಂಪಾದನ–ಲೂಯಿ ರೈಸ್,
ಪ್ರಕಾಶಕರು– ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ , ಮೈಸೂರು. 1989

5. ಸಂಸ್ಕೃತ–ಕನ್ನಡ ಶಬ್ದಕೋಶ, ಸಂಪುಟ–5, ಸಾಹಿತ್ಯ ವಿದ್ವಾನ್ ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ,
ಬಾಪ್ಕೊ ಪ್ರಕಾಶನ, ಬೆಂಗಳೂರು. 2003

6. ಡಾ. ಶಿವಯೋಗಿ ಕಂಬಾಳಿಮಠ– ಶ್ರೀರಂಭಾಪುರಿ ಮತ್ತು ಶ್ರೀ ಶೈಲ ಗುರು ಪೀಠಗಳು–ಪುಟ 2,
ಶ್ರೀ ಸಿದ್ಧಗಂಗಾ ಮಠ, ತುಮಕೂರು. 2008.

7. ಡಾ. ಚಂದ್ರಶೇಖರ ನಾರಣಾಪುರ– ಕರ್ನಾಟಕದ ವೀರಶೈವ ಮಠಗಳು
ಮಠಗಳ ಪರಂಪರೆ ಮಾಹಿತಿಕೋಶ ಸಂಪುಟ–1, ಪುಟ 1081
ಗೆಳೆಯ ಪ್ರಕಾಶನ, ಚನ್ನಾಪುರಸ್ತೆ, ವಿನಾಯಕನಗರ ಕೋಟೆ, ಚಿಕ್ಕಮಗಳೂರು. 2002

8.ಲಕ್ಷಾಂತರ ಜನರ ಭರವಸೆಯ ಬೆಳಕಾಗಿ ಜೆಎಸ್ಎಸ್ ಮಹಾವಿದ್ಯಾಪೀಠ–ಪರಿಚಾಯಿಕೆ

9.ಮಲೆಯಾರು ಗುರುಸ್ವಾಮಿ – ಶ್ರೀ ಸುತ್ತೂರು ಮಠದ ಗುರುಪರಂಪರೆ
ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ಧಗಂಗಾ ಮಠ, ತುಮಕೂರು. 2008

10.ಮಾನವ ಜನಾಂಗದ ಸೇವೆಯಲ್ಲಿ ಒಂದು ಸಹಸ್ರಮಾನ,
ಸುತ್ತೂರು ಮಠ ಮತ್ತು ಜೆಎಸ್ಎಸ್ ಮಹಾವಿದ್ಯಾಪೀಠ–ಸುವರ್ಣ ಮಹೋತ್ಸವ ವಿಶೇಷ ಸಂಚಿಕೆ

11.ಪೂಜಾರ್ ಎಸ್.ಎಸ್. –ಜಾನಪದ ಸರ್ವಜ್ಞ–ಸಮಾಜಕಾರ್ಯ– ಸಂಪಾದಕರು–ಡಾ. ಮರುಳಸಿದ್ದಯ್ಯ ಎಚ್.ಎಮ್. ಪ್ರಕಾಶಕರು; ಡಾ. ಭೈರೇಗೌಡ, ಪ್ರಗತಿ ಗ್ರಾಫಿಕ್ಸ್. 3ನೇ ಅಡ್ಡ ರಸ್ತೆ, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು. 2009

12.Suttur Sri shetra- The Abode of spiritual Bliss
Jagadguru Sri Veerasimhasana Samsthana Math
Suttur Srikshetra, Mysore Dist.

13.Website:wwwjssonline.org